ಕಾವೇರಿ ನೀರಿನ ವಿಚಾರದಲ್ಲಿ ಸರ್ಕಾರದ ಹೇಳಿಕೆಯ ಬಗ್ಗೆ

(ಈ ಹಂತದಲ್ಲಿ ಕಾಂಗ್ರೆಸ್ (ಐ) ಹಾಗೂ ಜೆಡಿ (ಎಸ್) ಪಕ್ಷದ ಶಾಸಕರುಗಳು ಬಾವಿಗಿಳಿದು ಧರಣಿ ಮಾಡಿದರು)

ಶ್ರೀ ಟಿ.ಬಿ. ಜಯಚಂದ್ರ (ತಿರಾ) : ಸನ್ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಮುಖ್ಯಮಂತ್ರಿಗಳು ಕೊಟ್ಟಂಥ ಉತ್ತರದಿಂದ ನಮಗೆ ಒಂದು ರೀತಿಯ ಸಮಾಧಾನ ತಂದಿತ್ತು. ಬಹಳ ಪ್ರಯತ್ನಗಳನ್ನು ಮಾಡುತ್ತಾರೆ, ಎಲ್ಲಾ ಪ್ರಯತ್ನಗಳನ್ನು ಮುಂದುವರೆಸುವುದರ ಜೊತೆಗೆ ನೀರು ಬಿಡುವುದಿಲ್ಲ ಎನ್ನುವ ವಿಶ್ವಾಸ ನಮಗೆ ಬಂದಿತ್ತು. ನೀರು ಬಿಟ್ಟಿಲ್ಲ ಎಂದೇ ನಾವು ತಿಳಿದುಕೊಂಡಿದ್ದೆವು. ಆದರೆ ನಮಗೆ ಈಗ ಬಂದಿರುವ ವರ್ತಮಾನದ ಪ್ರಕಾರ ನೀರು ರಾತ್ರೋ ರಾತ್ರಿ ಸಾರಾಸಗಟಾಗಿ ಸುಮಾರು 15 ರಿಂದ 20 ಸಾವಿರ ಕ್ಯೂಸೆಕ್ಸ್ ನೀರು ಹರಿದು ಹೋಗುತ್ತಿದೆ ಎಂದ ಮೇಲೆ ಜನತೆಗೆ ನಾವು ಸದನದಲ್ಲಿ ಕೊಟ್ಟಂಥ ಸಂದೇಶ ಏನು? ನಮಗೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂಥ ಆಶ್ವಾಸನೆ ಏನು? ಆ ಆಶ್ವಾಸನೆಯಂತೆ ಸರ್ಕಾರ ನಡೆದಿದೆಯೇ? ಕಾವೇರಿ ಜಲಾನಯನ ಪ್ರದೇಶದ ಜನರಿಗೆ ಮಾತ್ರವಲ್ಲ, ಇದು ಕರ್ನಾಟಕದ ಜನತೆಗೆ, ಧರಣಿಯಲ್ಲಿ ಭಾಗವಹಿಸಿರುವಂಥ ವಿರೋಧ ಪಕ್ಷದವರಿಗೆ ಮಾಡಿರುವ ಮೋಸ ಅಲ್ಲವೇ? ಎಂದು ನಾನು ಪ್ರಶ್ನೆ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಹಾಗಾಗಿ ಇದನ್ನು ಸರ್ಕಾರ ಮತ್ತೆ ಖಚಿತಪಡಿಸಬೇಕು. ಇಲ್ಲವೆಂದರೆ ನಾವು ನೀರು ಬಿಡುವುದನ್ನು ನಿಲ್ಲಿಸುತ್ತೇವೆ, ನಾವು ಕೊಟ್ಟ ಮಾತಿನಂತೆ ಪ್ರಯತ್ನಗಳನ್ನು ಮಾಡಿದ್ದೇವೆ, ನಾವು ನಿಲ್ಲಿಸುತ್ತಿದ್ದೇವೆ. ಎಂದು ಹೇಳಬೇಕು. ಈ ಸದನದಲ್ಲಿ ಏನೇ ಮಾತನಾಡಿದರೂ ಕೂಡ ನೀರು ಹೋದ ಮೇಲೆ ಏನು ಪ್ರಯೋಜನ? ನಮಗೆ ಮುಖ್ಯವಾಗಿರುವುದು ನೀರು, ಜಗಳ ಇರಲಿ, ಕಾದಾಟ ಇರಲಿ, ಹೋರಾಟ ಇರಲಿ ಏನೇ ಆದರೂ ನಾವು ನೀರನ್ನು ಉಳಿಸಿಕೊಳ್ಳಬೇಕಾಗುತ್ತದೆ. ಒಂದು ಬಾರಿ ನಮ್ಮ ಡ್ಯಾಮ್‌ನಿಂದ ನೀರು ಹೊರಗಡೆ ಹೋಯಿತು ಎಂದರೆ ಯಾವುದೇ ಸಂದರ್ಭದಲ್ಲೂ ಕೂಡ ನೀರು ವಾಪಸ್ಸು ಬರುವುದಕ್ಕೆ ಸಾಧ್ಯವಿಲ್ಲ. ಇದರಿಂದ ಕುಡಿಯುವ ನೀರಿಗೆ ಕಷ್ಟವಾಗುತ್ತದೆ. ಎಂಬುದು ನಿಮಗೆ ಅರಿವಾಗಬೇಕು. ಹೀಗಾಗಿ ಬಹಶಃ ಧರಣಿಯಲ್ಲಿ ಭಾಗವಹಿಸಿರುವ ನಮಗೆ ಈ ಧರಣಿಯಿಂದ ವಾಪಸ್ಸು ಬರಬೇಕೆಂಬ ಆಸೆ ಇತ್ತು. ಅದರಲ್ಲೂ ವಿಶೇಷವಾಗಿ ಇವತ್ತು ಬೆಳಗಾವಿಯಲ್ಲಿ ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಯಾಗಿರುವ ಕೃಷ್ಣಾ ಕೊಳ್ಳ ವ್ಯಾಪ್ತಿಯಲ್ಲಿ ಬರುವಂಥ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ನಾವು ನಿನ್ನೆಯಿಂದಲೂ ತುದಿಗಾಲಿನಲ್ಲಿ ನಿಂತಿದ್ದೇವೆ.

ಆದರೆ ನಾವು ಪ್ರಸ್ತಾಪ ಮಾಡುವುದಕ್ಕೆ ಇಲ್ಲಿ ಅವಕಾಶವಿಲ್ಲ. ಈ ರೀತಿ ವಾತಾವರಣವನ್ನು ಸರ್ಕಾರ ಸೃಷ್ಟಿ ಮಾಡಿಲ್ಲ. ಎನ್ನುವುದೇ ನಮ್ಮ ದುಃಖ. ಈ ಸಂಬಂಧ ಹೆಚ್ಚು ಚರ್ಚೆ ಮಾಡುವುದಕ್ಕೆ ಮುಖ್ಯಮಂತ್ರಿಗಳು ಈಗ ಇಲ್ಲಿ ಇಲ್ಲವಾದ್ದರಿಂದ ತಾವು ಮಧ್ಯ ಪ್ರವೇಶ ಮಾಡಿ, ಆಡಳಿತ ಪಕ್ಷದ ಮಂತ್ರಿಗಳನ್ನು ಕರೆದು, ನೀವು ಮಾಡಿರುವಂಥದ್ದು ಅಕ್ಷಮ್ಯ ಅಪರಾಧ, ಜನರಿಗೆ ಮಾಡಿರುವಂಥ ದ್ರೋಹ ಎನ್ನುವಂಥ ಮಾತನ್ನು ನೀವು ಹೇಳಬೇಕಾಗುತ್ತದೆ. ಅವರ ಮಧ್ಯದಲ್ಲಿ ಪ್ರವೇಶ ಮಾಡಿ ನೀವು ಹೇಳಲೇಬೇಕು. ಈ ಬಿಕ್ಕಟ್ಟನ್ನು ಪ್ರಾಮಾಣಿಕವಾಗಿ ಬಗೆಹರಿಸುವಂಥ ಕೆಲಸವನ್ನು ಮಾಡುತ್ತೀರಿ ಎಂಬ ಭರವಸೆಯಿದೆ. ಇದನ್ನು ನಿಮ್ಮಿಂದ ನಾವು ಏಕೆ ನಿರೀಕ್ಷೆ ಮಾಡುತ್ತಿದ್ದೇವೆಂದರೆ ನೀವು ಕಾವೇರಿಯ ವರಪುತ್ರರು, ಇದು ನಿಮ್ಮ ಭಾಗದಲ್ಲಿ ಉದ್ಭವವಾಗುವಂಥ ನೀರು, ಇದು ನಮ್ಮ ಜನತೆಗೆ ಬಳಕೆಯಾಗುವಂಥ ರೀತಿಯಲ್ಲಿ ಆಗಬೇಕಾಗುತ್ತದೆ. ಆದ್ದರಿಂದ ತಮ್ಮಿಂದ ನಾವು ಒಳ್ಳೆಯದನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಪರಿಹಾರ ಸಿಗುತ್ತದೆ. ಎನ್ನುವಂಥ ವಿಶ್ವಾಸ ನಮಗಿದೆ. ದಯಮಾಡಿ ಮಧ್ಯ ಪ್ರವೇಶ ಮಾಡಬೇಕು.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಮ್ಮ ಉಪನಾಯಕರು ನಿಮ್ಮಲ್ಲಿ ಮನವಿ ಮಾಡಿದ್ದಾರೆ. ನಿನ್ನೆ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಈ ಸದನದಲ್ಲಿ ಕೊಟ್ಟಂಥ ಸಂದರ್ಭದಲ್ಲಿ, ನಿಮ್ಮ ಹೇಳಿಕೆ ನೋಡಿದರೆ, ನೀರು ಬಿಡುತ್ತೇವೆ ಅಥವಾ ಬಿಡುವುದಿಲ್ಲ. ಎಂದು ಹೇಳಿಲ್ಲವೆಂದು ನಾನು ಹೇಳಿದ್ದೆ. ಇದನ್ನು ನೋಡಿದರೆ ನೀವು ನೀರು ಬಿಡುವುದಕ್ಕೆ ತೀರ್ಮಾನ ಮಾಡಿಕೊಂಡಂತೆ ಕಾಣುತ್ತದೆ. ಅದೇ ರೀತಿ ನೀರು ಬಿಟ್ಟುಬಿಟ್ಟದ್ದೀರಿ. ನೀರು ಇಲ್ಲದೇ ನಮ್ಮ ಬೆಳೆ ಒಣಗಿ ಹೋಗುತ್ತಿದೆ. ಜನಗಳಿಗೆ ಕುಡಿಯುವ ನೀರಿಗೆ ಬಹಳ ತೊಂದರೆ ಆಗುತ್ತದೆ, ಹಾಹಾಕಾರ ನಿರ್ಮಾಣವಾಗುತ್ತದೆ. ನೀರು ಬಿಡಬೇಡಿ ಎಂದು ಪದೇ ಪದೇ ಒತ್ತಾಯ ಮಾಡಿದರೂ ಕೂಡ ಇವತ್ತು ನೀರು ಬಿಟ್ಟಿರುವಂಥದ್ದು ಕೇವಲ ಕಾವೇರಿ ಬೇಸಿನ್ ಜನರಿಗಷ್ಟೇ ಅಲ್ಲ, ಇಡೀ ಕರ್ನಾಟಕ ಜನರಿಗೆ ಈ ಸರ್ಕಾರ ದ್ರೋಹ ಮಾಡಿದೆ ಎಂದು ವಿಧಿಯಿಲ್ಲದೆ ಹೇಳಬೇಕಾಗುತ್ತದೆ. ನಮಗೆ ಧರಣಿ ಮಾಡಬೇಕೆನ್ನುವ ಉದ್ದೇಶ ಇಲ್ಲ. ಏಕೆಂದರೆ ಈಗ ಧರಣಿ ಮಾಡಬಾರದೆಂದು ನಾವು ತೀರ್ಮಾನ ಮಾಡಿಕೊಂಡಿದ್ದೇವೆ. ಧರಣಿ ಮಾಡಿದರೆ ಎಲ್ಲಾ ಬಿಲ್ಲುಗಳನ್ನು ಚರ್ಚೆಯಿಲ್ಲದೆ ಹಾಗೇ ಪಾಸ್ ಮಾಡಿಕೊಂಡು, ಫೈನಾನ್ಸ್ ಬಿಲ್ಲುಗಳನ್ನು ಪಾಸ್ ಮಾಡಿಕೊಳ್ಳುತ್ತಾರೆ. ಅದು ಅನುಭವವಾಗಿದ್ದು, ಧರಣಿ ಮಾಡಬಾರದೆಂದು ತೀರ್ಮಾನ ಮಾಡಿಕೊಂಡಿದ್ದೇವೆ. ಅದಕ್ಕಾಗಿ Business Advisory Committee ಯಲ್ಲಿ

ಅಧಿವೇಶನವನ್ನು ಹೆಚ್ಚು ದಿನ ನಡೆಸಿ ಎಂದು ನಿಮಗೆ ಮನವಿ ಮಾಡಿದ್ದೇವೆ. ಉತ್ತರ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಕೃಷ್ಣಾ ನ್ಯಾಯಾಧೀಕರಣದಲ್ಲಿ Upper Krishna ಸಮಸ್ಯಗಳಿವೆ, ಡಾ. ಡಿ. ನಂಜುಂಡಪ್ಪ ವರದಿಯ ಸಮಸ್ಯಗಳಿವೆ 371ರ ಸಮಸ್ಯೆಯಿದೆ ಹೀಗೆ ಬೇರೆ ಬೇರೆ ಅನೇಕ ಸಮಸ್ಯೆಗಳಿವೆ. ಚರ್ಚೆ ಮಾಡಬೇಕೆನ್ನುವ ಉದ್ದೇಶ ನಮಗಿತ್ತು. ಸುಮಾರು ರೂ. 400 ಕೋಟಿಗಳನ್ನು ಖರ್ಚು ಮಾಡಿ ಸುವರ್ಣ ವಿಧಾನಸೌಧವನ್ನು ನಿರ್ಮಿಸಿ ಉತ್ತರ ಭಾಗದ ಜನರ ಸಮಸ್ಯೆಗಳನ್ನು ಚರ್ಚೆ ಮಾಡದೇ ಹೋದರೆ ಇಲ್ಲಿ ನಿರ್ಮಾಣ ಮಾಡಿರುವುದು ಕೂಡ ವ್ಯರ್ಥವಾಗುತ್ತದೆ. ಎಷ್ಟು ದಿನ ಅಧಿವೇಶನ ನಡೆಯುತ್ತದೆ. ಅಷ್ಟೂ ದಿನಗಳನ್ನು ಸದುಪಯೋಗ ಮಾಡಿಕೊಳ್ಳಬೇಕೆಂಬುದು ನಮ್ಮ ಉದ್ದೇಶವಾಗಿತ್ತು. ಆದರೆ, ಅನಿವಾರ್ಯವಾಗಿ ಇವತ್ತು ಧರಣಿ ಮಾಡಬೇಕಾದಂಥ ಪರಿಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡಿದೆ. ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಕೆ. ಎಸ್. ಈಶ್ವರಪ್ಪನವರು ಸದನದಲ್ಲೇ ಇದ್ದಾರೆ, ಈಗಲೂ ನಾನು ಹೇಳುತ್ತೇನೆ, ಕಾವೇರಿ ನೀರು ಬಿಡುತ್ತಿರುವುದನ್ನು ನಿಲ್ಲಿಸಿ ಬಿಡಿ. ನೀರು ಬಿಡುವುದಕ್ಕೆ ಹೋಗಬೇಡಿ. ಇಲ್ಲವಾದರೆ ಆ ಭಾಗದ ಜನ ಶಾಪ ಹಾಕುತ್ತಾರೆ. ಆ ಶಾಪ ನಿಮಗೆ ತಟ್ಟಿಬಿಡುತ್ತದೆ. ನೀರು ನಿಲ್ಲಿಸಿ, ಏನಾಗುತ್ತದೆ ? Revision Petition ಹಾಕಿ, ತಮಿಳುನಾಡಿನಲ್ಲಿ ಮಳೆ ಬೀಳುತ್ತಿದೆ, 2 ದಿನಗಳಲ್ಲಿ 2 ಟಿ.ಎಂ.ಸಿ ನೀರು ಜಾಸ್ತಿಯಾಗಿದೆ. ಅವರಿಗೆ ತಕ್ಷಣಕ್ಕೆ ನೀರು ಬೇಕಾಗಿಲ್ಲ. ನೀರೇ ಇಲ್ಲ, ಮೆಟ್ಟೂರು ಡ್ಯಾಮ್ ಒಣಗಿ ಹೋಗಿದೆ. ಕುಡಿಯುವುದಕ್ಕೆ ಹಾಗೂ ಬೆಳೆ ಬೆಳೆಯುವುದಕ್ಕೆ ತಕ್ಷಣಕ್ಕೆ ನೀರಿಲ್ಲವೆಂದರೆ I can understand. ಇವತ್ತು ಸಹ 18 ಟಿ.ಎಂ.ಸಿ. ನೀರು ಅವರ ಹತ್ತಿರವಿದೆ. ಅಷ್ಟೊಂದು ನೀರು ಇಟ್ಟುಕೊಂಡಿದ್ದರೂ, ತಕ್ಷಣವೇ ನೀರು ಅವರಿಗೆ ಬೇಕಾಗಿಲ್ಲದಿದ್ದರೂ ಸಹ ನೀರು ಕೊಟ್ಟಿರುವಂಥದ್ದು ಸಮರ್ಥನೀಯವಲ್ಲ ಮಾನ್ಯ ಅಧ್ಯಕ್ಷರೆ, ತಾವು ಕಾವೇರಿ ಉಗಮ ಸ್ಥಾನದಿಂದ ಬಂದಿರುವಂಥವರು ತಮಗೆ ಅರ್ಥವಾಗುತ್ತದೆ. ಕಾವೇರಿ ನದಿ ಬಗ್ಗೆ ನಿಮಗೆ emotional attachment. ಇದೆ.

ಮಾನ್ಯ ಅಧ್ಯಕ್ಷರೆ, ಕರ್ನಾಟಕಕ್ಕೆ ಇಂತಹ ಅನ್ಯಾಯವಾಗುತ್ತಿದ್ದರೆ, ಅದನ್ನು ಹೇಗೆ ಸಹಿಸಿಕೊಳ್ಳುವುದು? ಎಂಬುದನ್ನು ನೀವೇ ಹೇಳಿ ನೋಡೋಣ. ಆದ್ದರಿಂದ ಈ ಬಗ್ಗೆ ತಾವು ಸರಿಯಾದ ಮಧ್ಯಸ್ಥಿಕೆ ವಹಿಸಬೇಕು. ಸರ್ಕಾರದವರನ್ನು ಕರೆಸಿ ಮಾತನಾಡಿಸಿ, ಕೂಡಲೇ ನೀರು ಬಿಡುವುದನ್ನು ನಿಲ್ಲಿಸಬೇಕು. ಇವತ್ತು ರಾತ್ರೋರಾತ್ರಿ ನೀರು ಬಿಟ್ಟಿದ್ದಾರೆ. ನಿನ್ನೆ ಬೆಳಿಗ್ಗೆಯೆಲ್ಲಾ ನೀರು ಬಿಟ್ಟಿರಲಿಲ್ಲ. ಆದರೆ ರಾತ್ರಿ ಇದ್ದಕ್ಕಿದ್ದ ಹಾಗೆ 15–20 ಸಾವಿರ ಕ್ಯೂಸೆಕ್ಸ್‌ವರೆಗೆ ನೀರನ್ನು ಒಟ್ಟಿಗೇ ಬಿಟ್ಟಿದ್ದಾರೆ. ನಮ್ಮ ಕೆ.ಆರ್. ಪೇಟೆ ಶಾಸಕರು ಅಲ್ಲಿ

ಸುಮಾರು 20 ಸಾವಿರ ಕ್ಯೂಸೆಕ್ಸ್‌ಗಳಷ್ಟು ನೀರು ಹೋಗುತ್ತಿದೆ ಎಂದು ಹೇಳುತ್ತಿದ್ದಾರೆ. ಜನ ಅಲ್ಲಿ ಧರಣಿ ಮಾಡುತ್ತಿದ್ದಾರೆ, ಪ್ರತಿಭಟನೆ ಮಾಡುತ್ತಿದ್ದಾರೆ. ಇದರಿಂದಾಗಿ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಸರ್ಕಾರ ಒಂದು ದೃಢವಾದ ನಿಲುವನ್ನು ತೆಗೆದುಕೊಳ್ಳಬೇಕು. ಇಂತಹ ಸಂದರ್ಭದಲ್ಲೇ ಸರ್ಕಾರ ಧೈರ್ಯ ಪ್ರದರ್ಶನ ಮಾಡಬೇಕಾಗಿದೆ. ತನ್ನ ರಾಜಕೀಯ ಇಚ್ಛಾಶಕ್ತಿ ಏನು? ಅದು ಜನಪರವಾಗಿ ಇದೆಯೋ, ಇಲ್ಲವೋ? ಎನ್ನುವುದನ್ನು ಇಂತಹ ಸಂದರ್ಭದಲ್ಲಿ ಸರ್ಕಾರ ತೋರಿಸಬೇಕಾಗಿದೆ. ಈಗ ಅವರ ಪಕ್ಷದಲ್ಲೂ ಸಹಾ ಗುಂಪುಗಳಾಗಿವೆ. ಇದರಿಂದಾಗಿ ಅವರಿಗೆ decision ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ನಾಳೆ ಮಾನ್ಯ ಯಡಿಯೂರಪ್ಪನವರು ಹಾವೇರಿಯಲ್ಲಿ ಸಮಾವೇಶವೊಂದನ್ನು ನಡೆಸುತ್ತಿದ್ದಾರೆ. ಅದಕ್ಕೆ ಒಂದಷ್ಟು ಜನ ಎಂ.ಎಲ್.ಎ.ಗಳು ಹೋಗುತ್ತಾರೆಂಬ ಸುದ್ದಿ ಇದೆ. ಅವರು ಹೋಗುತ್ತಾರೋ, ಬಿಡುತ್ತಾರೋ ನನಗೆ ಗೊತ್ತಿಲ್ಲ. ಆದರೆ ಹೋಗುತ್ತಾರೆಂದು ನನಗೆ ಸುದ್ದಿ ಬಂದಿದೆ.

ಶ್ರೀ ಟಿ.ಬಿ. ಜಯಚಂದ್ರ: ಆ ಕಡೆ ನೋಡಿ, ಒಬ್ಬರೂ ಸಹಾ ಇಲ್ಲ. ಎಲ್ಲರೂ ಸೇರಿ ಮಾನ್ಯ ಯಡಿಯೂರಪ್ಪನವರ ಜೊತೆಗೆ ತಿಂಡಿ ಮಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಯಡಿಯೂರಪ್ಪನವರು ಇಲ್ಲಿಗೇ ಬಂದು ಬಿಟ್ಟಿದ್ದಾರೆ. ಎಲ್ಲರೂ ಅವರೊಡನೆ ಇದ್ದಾರೆ. ಮಾನ್ಯ ಈಶ್ವರಪ್ಪನವರೆ, ಮಾನ್ಯ ಯಡಿಯೂರಪ್ಪನವರು ಎಲ್ಲರನ್ನೂ ಕರೆಯಲು ಇಲ್ಲಿಗೇ ಬಂದು ಬಿಟ್ಟಿದ್ದಾರಂತೆ. ಮಾನ್ಯ ಸವದಿಯವರೆ, ಅವರು ನಿಮ್ಮನ್ನೂ ಸಹ ಕರೆದಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಸಿದ್ದರಾಮಯ್ಯನವರು ಮಾನ್ಯ ಯಡಿಯೂರಪ್ಪನವರ ವಿಷಯವನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದಾರೆ. ಡಿಸೆಂಬರ್ 9ರಂದು ಶ್ರೀಮತಿ ಸೋನಿಯಾ ಗಾಂಧಿಯವರ Birthday ಇದೆ. ಕಾಂಗ್ರೆಸ್‌ನವರಿಗೆ ಅದನ್ನು ಆಚರಿಸಲಿಕ್ಕೆ ಶಕ್ತಿಯಿಲ್ಲ. ಅದನ್ನು ಅವರು ಮಾಡುತ್ತಿದ್ದಾರೆ ಬಿಡಿ. ನಿಮ್ಮದಂತೂ ವಿಧಾನ ಸಭೆಯಲ್ಲೂ ಹೋರಾಟವಿಲ್ಲ, ಹೊರಗಡೆಯೂ ಹೋರಾಟವಿಲ್ಲ. ಕೇವಲ ಎ.ಸಿ. ರೂಮಿನಲ್ಲಿ ಕುಳಿತುಕೊಂಡು press meet ಮಾಡುತ್ತೀರಿ. ನಿಮ್ಮಲ್ಲಿ ಒಳಗೊಳಗೇ ಗುಂಪುಗಾರಿಕೆ ಇದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅದು ನಿಮ್ಮ ತರಹ ಬಹಿರಂಗವಾಗಿರಬೇಕೆಂದು ಹೇಳುತ್ತೀರಾ? ಒಳಗೊಳಗೇ ಬೇಡ, ಈ ತರಹ ಬಹಿರಂಗವಾಗಿರಬೇಕು. ಒಬ್ಬರಿಗೊಬ್ಬರು ಕಚ್ಚಾಡಿಕೊಂಡು ಬೀದಿಯಲ್ಲಿ ಇರಬೇಕೆಂದು ನೀವು ಹೇಳುತ್ತೀರಾ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಯಡಿಯೂರಪ್ಪನವರು ನೇರವಾಗಿ ನಾನು ಬೇರೆ ಪಕ್ಷ ಕಟ್ಟುತ್ತೇನೆಂದು ಹೋಗಿದ್ದಾರೆ. ನೀವು ಒಳಗೊಳಗೇ ಗುಂಪುಗಾರಿಕೆ ಮಾಡುತ್ತಿದ್ದೀರಿ. ನಿಮ್ಮ ಪರಿಸ್ಥಿತಿ ಶೋಚನೀಯವಾಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಮ್ಮಲ್ಲಿ ಒಳಗೂ ಗುಂಪುಗಾರಿಕೆ ಇಲ್ಲ, ಹೊರಗೂ ಗುಂಪುಗಾರಿಕೆ ಇಲ್ಲ. We are all united. We are one.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ನೀವು ಇಂದಿನ ಪತ್ರಿಕೆಯನ್ನು ಓದಿದ್ದೀರಿ ಎಂದು ತಿಳಿದುಕೊಂಡಿದ್ದೇನೆ. ಶ್ರೀಯುತ ಒಬಾಮಾ ನಂ. 1 ಆಗಿದ್ದರೆ, ಶ್ರೀಮತಿ ಸೋನಿಯಾ ಗಾಂಧಿಯವರು ವಿಶ್ವದ ಅಗ್ರಗಣ್ಯರಲ್ಲಿ 12ನೇ ಸ್ಥಾನದಲ್ಲಿದ್ದಾರೆ.

(ಗೊಂದಲ)

ಅಧ್ಯಕ್ಷರು: ವಿಷಯದ ಬಗ್ಗೆ ಮಾತನಾಡೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, Our High Command is very strong. Our President is very strong. She is an iron lady.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಇವತ್ತು she is an international figure.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ವಿಷಯಾಂತರ ಮಾಡಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಈಶ್ವರಪ್ಪನವರೆ, ಮಾನ್ಯ ಯಡಿಯೂರಪ್ಪನವರು ನಮ್ಮ ನಾಯಕಿಯ birthday ದಿನವನ್ನೇ select ಮಾಡಿಕೊಂಡಿದ್ದಾರೆ. ನಿಮಗೆ ದೊಡ್ಡ ಅವಮಾನವಾಗಲಿ ಎಂದು ಅವರು ಹೀಗೆ ಮಾಡಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಕಾಂಗ್ರೆಸ್‌ನವರಿಗೆ ಅದನ್ನು ಮಾಡಲೂ ಸಹ ಶಕ್ತಿಯಿಲ್ಲವೆಂದು, ಅವರು ಅದನ್ನು ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಾವು ಮಾಡುತ್ತೇವೋ, ಬಿಡುತ್ತೇವೋ? ಅದೆಲ್ಲಾ ನಿಮಗ್ಯಾಕೆ? ಅವರ ಹುಟ್ಟುಹಬ್ಬ ಮಾಡುತ್ತೇವೋ, ಬಿಡುತ್ತೇವೋ, ಅದು ನಮಗೆ ಬಿಟ್ಟಿದ್ದು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ನಮ್ಮ ನಾಯಕಿಯ ನಾಯಕತ್ವವನ್ನು ಮತ್ತು ದಿಟ್ಟತನವನ್ನು ಅವರು ಮೆಚ್ಚಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಈಶ್ವರಪ್ಪನವರೆ, ಅದೆಲ್ಲಾ ಬೇಡಿ. ಮಾನ್ಯ ಯಡಿಯೂರಪ್ಪನವರ ಜೊತೆಗೆ ಇವತ್ತು ತಿಂಡಿ ತಿನ್ನಲು ಹೋಗಿರುವವರನ್ನು ಮತ್ತು ಅವರ ಪಕ್ಷಕ್ಕೆ ಹೋಗುವವರನ್ನು ನಿಮ್ಮ ಪಕ್ಷದಿಂದ expel ಮಾಡಿ ಸಾಕು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ನಾಳೆ ನೋಡುವಿರಂತೆ. 9ನೇ ತಾರೀಖು ಆದ ನಂತರ, 10ನೇ ತಾರೀಖಿನಿಂದ ಏನಾಗುತ್ತದೆ ಎಂಬುದನ್ನು ನೀವು ನೋಡುತ್ತಿರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಾನು ಆಗ ನಿಮ್ಮನ್ನು ಛೇಷ್! ಎನ್ನುತೇನೆ. ಮೊದಲು ಅವರೆಲ್ಲರನ್ನೂ ಪಕ್ಷದಿಂದ ತೆಗೆದು ಹಾಕಿ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್: ಇಲ್ಲಿ ಬಹಳ ಗಂಭೀರವಾಗಿ ಚರ್ಚೆ ನಡೆಯುತ್ತಿದೆ. ದಯವಿಟ್ಟು ಕಾವೇರಿ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಎಸ್. ಶಿವಣ್ಣ: ನೀವೆಲ್ಲಾ ಒಗ್ಗಟ್ಟಾಗಿ. ಮಾನ್ಯ ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿಗಳು ಎಂದು ಘೋಷಣೆ ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಶಿವಣ್ಣನವರೆ, ನಿಮಗೇ ನಾನು ಮುಖ್ಯಮಂತ್ರಿಯಾಗಬೇಕೆಂಬ ಆಸೆ ಇರುವಾಗ, ನಮ್ಮ ಪಕ್ಷದವರು ನನಗೆ ಬೆಂಬಲ ಕೊಡದಿರುತ್ತಾರೆಯೇ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ನಮ್ಮಪ್ಪನಾಣೆಗೂ ನೀವು ಮುಂದಕ್ಕೆ ಬರುವುದಿಲ್ಲ. ನಾವೇ ಅಧಿಕಾರಕ್ಕೆ ಬರುವುದು. ಅದರ ಬಗ್ಗೆ ನೀವೇನೂ ಅನುಮಾನ ಪಡಬೇಡಿ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ದಯವಿಟ್ಟು ಕಾವೇರಿ ಬಗ್ಗೆ ಮಾತನಾಡಲಿಕ್ಕೆ ಹೇಳಿ. ಇಲ್ಲಿ ಸಮಸ್ಯೆ ಬಹಳ ಗಂಭೀರವಾಗಿ. ಬೆಳಿಗ್ಗೆ 6 ಗಂಟೆಯಿಂದ ಜನರೇಲ್ಲಾ ಚರ್ಚೆ ಮಾಡುತ್ತಿದ್ದಾರೆ, ರಸ್ತೆಯಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡಿ, ಅದನ್ನು ಬಿಟ್ಟು ಬೇರೆ ವಿಷಯ ಪ್ರಸ್ತಾಪಿಸುವುದು ಬೇಡ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಸ್ವಾಮಿ, ರಾಜಕಾರಣ ಹೊರಗಡೆ ಮಾಡೋಣ. ಆದರೆ ಈಗ ದಯವಿಟ್ಟು ಕಾವೇರಿ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ರಾಜಕಾರಣ ಶುರು ಮಾಡಿದ್ದು ನೀವು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ವಿರೋಧ ಪಕ್ಷದ ನಾಯಕರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಮತ್ತು ಕೃಷ್ಣಾ ಬಗ್ಗೆ ತಾವು ಮಾತನಾಡಬೇಕೆಂದಿದ್ದೆವು, ಆದರೆ ಅದು ಆಗಲಿಲ್ಲವೆಂದು ಅವರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಶ್ರೀಮತಿ ಸೋನಿಯಾ ಗಾಂಧಿಯವರು ವಿಶ್ವದ ಅಗ್ರಗಣ್ಯರಲ್ಲಿ 12ನೇ ಸ್ಥಾನದಲ್ಲಿದ್ದಾರೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ವಿರೋಧ ಪಕ್ಷದ ನಾಯಕರು ದಯವಿಟ್ಟು ಕಾವೇರಿ ಬಗ್ಗೆ ಮಾತನಾಡಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಮ್ಮದೇನೂ ಇಲ್ಲ. ಅವರ ಪಕ್ಷದೊಳಗೆ ಏನೇನು ಬೆಳವಣಿಗೆಗಳಾಗುತ್ತಿವೆಯೋ, ಅದಕ್ಕೂ ನಮಗೂ ಸಂಬಂಧವಿಲ್ಲ. ಮಾನ್ಯ ಯಡಿಯೂರಪ್ಪನವರು ಸಮಾವೇಶವನ್ನಾದರೂ ಮಾಡಲಿ, ಹೊರಗಡೆಯಾದರೂ ಹೋಗಲಿ, ಏನನ್ನಾದರೂ ಮಾಡಲಿ. We are not concerned about all those things. ನಮಗೆ

ಏನೆಂದರೆ, ನಮ್ಮದು ಶಿಸ್ತಿನ ಪಕ್ಷ ಎಂದು ನೀವು ಹೇಳಿಕೊಳ್ಳುತ್ತಿದ್ದಿರಿ, ನೀವು ಇಂತಹ ಪರಿಸ್ಥಿತಿಗೆ ಬಂದಿರಲ್ಲಾ? ಎಂದು ವ್ಯಥೆಯಾಗುತ್ತಿದೆ. ಈ ರಾಜ್ಯದ ಜನ ಇವತ್ತು ಅವರಿಗೆ ಈ ರೀತಿಯಾಗಿ ಮಾತನಾಡುತ್ತಿದ್ದರಲ್ಲಾ? ಒಂದು ರಾಷ್ಟ್ರೀಯ ಪಕ್ಷಕ್ಕೆ ಹೀಗಾಯಿತಲ್ಲಾ ಎನ್ನುವ ವ್ಯಥೆಯಿಂದ ಈ ಮಾತುಗಳನ್ನು ಹೇಳಿದೆನೇ ಹೊರತು, ಬೇರೆ ಇನ್ನಾವ ಕಾರಣಕ್ಕೂ ನಾನು ಹೇಳಲಿಲ್ಲ. ಇದನ್ನು ಪ್ರಸ್ತಾಪಿಸಿ ರಾಜಕೀಯ ಮಾಡಬೇಕೆಂಬ ಉದ್ದೇಶವೇನೂ ನನಗೆ ಇರಲಿಲ್ಲ. ನೀವು ಮಾನ್ಯ ಯಡಿಯೂರಪ್ಪನವರ ಜೊತೆಗೆ ಹೋಗುವವರನ್ನೆಲ್ಲಾ suspend ಮಾಡುತ್ತೇವೆಂದು ಹೇಳಿದ್ದೀರಿ. ಅದು ಬಹಳ ಸಂತೋಷದ ವಿಚಾರ. ಒಂದು ರಾಷ್ಟ್ರೀಯ ಪಕ್ಷವಾಗಿ ಅದನ್ನು ಮಾಡಬೇಕಾಗುತ್ತದೆ. ನೀವು ಆ ರಾಷ್ಟ್ರೀಯ ಪಕ್ಷದ ಅಧ್ಯಕ್ಷರಾಗಿದ್ದೀರಿ. ನಿಮ್ಮ ಕಾಲದಲ್ಲಿ ಆ ತರಹದ ಕ್ರಮ ಕೈಗೊಳ್ಳುವಂತಹ ಧೈರ್ಯ ತೋರಿಸುತ್ತೇವೆಂದು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ನಿಮ್ಮ ನಿಲುವನ್ನು ನಾನು ಸ್ವಾಗತ ಮಾಡುತ್ತೇನೆ. ಅದನ್ನು ಯಾವುದೇ ರಾಜಕೀಯ ಪಕ್ಷದಲ್ಲಿದ್ದರೂ ಮಾಡಬೇಕು. ನಮ್ಮ ಪಕ್ಷದಲ್ಲಿ ಆದರೂ ಮಾಡಬೇಕು, ನಿಮ್ಮ ಪಕ್ಷದಲ್ಲಾದರೂ ಮಾಡಬೇಕು. ಮಾನ್ಯ ಯಡಿಯೂರಪ್ಪನವರು ಇರಲಿ ಅಥವಾ ಇನ್ಯಾರೇ ಇರಲಿ. ಅದನ್ನು ಮಾಡಲೆಬೇಕಾಗುತ್ತದೆ. ಅದನ್ನು ಮಾಡಿ, ನಮಗೂ ಬಹಳ ಸಂತೋಷವಾಗುತ್ತದೆ. ನಮಗೆ ಏನೆಂದರೆ...

ಶ್ರೀ ಟಿ.ಬಿ. ಜಯಚಂದ್ರ: ಶ್ರೀರಾಮುಲು ಅವರ ಜೊತೆಗೆ ಹೋದಾಗ ಇವರು ಧೈರ್ಯ ತೋರಿಸುತ್ತಾರೆಂದು ನಾವು ಅಂದುಕೊಂಡಿದ್ದೆವು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಇವರ ಹಣೆಬರಹ ಕೇವಲ ಮಾನ್ಯ ಯಡಿಯೂರಪ್ಪ ಮತ್ತು ಮಾನ್ಯ ಶ್ರೀರಾಮುಲು ಅವರ ಬಗ್ಗೆ ಮಾತನಾಡುವುದೇ ಆಗಿ ಹೋಯಿತಲ್ಲಾ? ನಿಮ್ಮ ಪರಿಸ್ಥಿತಿ ನೋಡಿದರೆ ನನಗೆ ಅಯ್ಯೋ! ಎನಿಸುತ್ತಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅವರೇನು ನಮ್ಮ ಪಕ್ಷದವರಾ? ನೀವು ಬೇಡ ಎಂದರೆ ಬಿಡಿ. ನಾನು ನಿಮಗೆ ಸಲಹೆ ಕೊಟ್ಟಿದ್ದೇವೆ ಅಷ್ಟೆ. ಮಾನ್ಯ ಈಶ್ವರಪ್ಪನವರೆ, ನಿಮಗೆ ಬೇಕಾದರೆ ಈ ಸಲಹೆಯನ್ನು ತೆಗೆದುಕೊಳ್ಳಿ ಅಥವಾ ಬಿಟ್ಟುಬಿಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇವರಿಗೆ ಕೃಷ್ಣಾ ನದಿಯ ಬಗ್ಗೆಯಾಗಲಿ ಅಥವಾ ಕಾವೇರಿ

ನದಿಯ ಬಗ್ಗೆಯಾಗಲಿ ಚರ್ಚೆ ಬೇಡ. ನಿಮಗೆ ಕೇವಲ ಮಾನ್ಯ ಯಡಿಯೂರಪ್ಪ ಅಥವಾ ಶ್ರೀರಾಮುಲು ಅವರ ಬಗ್ಗೆಯೇ ಮಾತನಾಡುವುದೇ ನಿಮ್ಮ ಹಣೆಬರಹವಾಯಿತು. ಆಯಿತು! ಅವರ ಬಗ್ಗೆಯೇ ಮಾತನಾಡಿಕೊಳ್ಳಿ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ನಾನು ಕಾವೇರಿ ಬಗ್ಗೆಯೇ ಮಾತನಾಡುತ್ತೇನೆ. ದಯವಿಟ್ಟು ನನಗೆ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಕಾವೇರಿ ಮತ್ತು ಕೃಷ್ಣಾ ನದಿ ಕಾಂಗ್ರೆಸ್‌ನವರಿಗೆ ಎರಡು ಕಣ್ಣುಗಳಿದ್ದಂತೆ. ಇವುಗಳನ್ನು, ಈ ಭಾಗದ ಜನರನ್ನು, ಕೃಷ್ಣಾ ಕೊಳ್ಳದ ಜನರನ್ನು, ಕಾವೇರಿ ಕೊಳ್ಳದ ಜನರನ್ನು ರಕ್ಷಣೆ ಮಾಡತಕ್ಕಂಥದ್ದು ನಮ್ಮ ಜವಾಬ್ದಾರಿಯಾಗಿದೆ. ಅದಕ್ಕೆ ನಾವು ಬದ್ಧರಾಗಿದ್ದೇವೆ. ಆದರೆ ಇವರು ಸರ್ಕಾರದಲ್ಲಿದ್ದುಕೊಂಡು, ಈ ರಾಜ್ಯದ ಜನರಿಗೆ ಇಷ್ಟೊಂದು ಅನ್ಯಾಯ ಮಾಡುತ್ತಿದ್ದೀರಲ್ಲಾ ಎಂಬ ಬಗ್ಗೆ ನಮಗೆ ನೋವಿದೆ. ಆ ನೋವನ್ನು ಇಲ್ಲಿ ನಾವು ನಿಮ್ಮ ಮುಂದೆ ತೋಡಿಕೊಳ್ಳುತ್ತಿದ್ದೇವೆ. ಇವತ್ತು ಈ ರಾಜ್ಯದ ಜನರಿಗೆ ಏನೆಂದು ಉತ್ತರ ಹೇಳುವುದು? ಬೆಳೆಗಳೆಲ್ಲಾ ಒಣಗಿ ಹೋಗುತ್ತಿದೆ. ಇವತ್ತು ಇದರಿಂದ ನಮಗೆ ಏನಾದರೂ ಬೆಳೆ ನಷ್ಟವಾದರೆ, ಪ್ರತಿ ಎಕರೆಗೆ ಸರ್ಕಾರ 25 ಸಾವಿರ ರೂ. ಗಳನ್ನು ಕೊಡಬೇಕಾಗುತ್ತದೆ ಎಂದು ನಾನು ಒತ್ತಾಯ ಮಾಡುತ್ತೇನೆ. ಇಲ್ಲದಿದ್ದರೆ ಈ ಸರ್ಕಾರ ಇರಬಾರದು. ನೀವು ಯಾವ ಕಾರಣಕ್ಕೂ ಅಧಿಕಾರದಲ್ಲಿ ಇರಬಾರದು ಎಂದು ನಾನು ಒತ್ತಾಯ ಮಾಡುತ್ತೇನೆ. ನಿಮ್ಮ ಕೈಯಲ್ಲಿ ಆಗದಿದ್ದರೆ, ನೀವು ಜನರ ರಕ್ಷಣೆ ಮಾಡಲಿಕ್ಕೆ ಆಗದಿದ್ದರೆ, ನೀವು ಅಧಿಕಾರ ಬಿಟ್ಟು ಹೋಗಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಸಿದ್ದರಾಮಯ್ಯನವರೆ, ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ನೀರನ್ನು ಬಿಟ್ಟಿಲ್ಲವೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಆಗ ಇಂತಹ ಪರಿಸ್ಥಿತಿ ಇತ್ತಾ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈಗ ರಾಜ್ಯಾದ್ಯಂತ ಬರಗಾಲವಿದೆ, ಕುಡಿಯುವುದಕ್ಕೆ ನೀರಿಲ್ಲ, ಜಾನುವಾರುಗಳಿಗೆ ಮೇವಿಲ್ಲ, ಇವತ್ತು ಜನರು ಗುಳೇ ಹೋಗುತ್ತಿದ್ದಾರೆ, ಬೆಳೆಗಳು ಹಾಳಾಗಿ ಹೋಗಿವೆ. ಇಂತಹ ಪರಿಸ್ಥಿತಿ ಯಾವಾಗ ಆಗಿತ್ತು? ಕಾವೇರಿ ವಿಚಾರದಲ್ಲಿ ಬಹಳ ಹಗುರವಾಗಿ ಯಾರೂ ಮಾತನಾಡಬಾರದು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಸವದಿಯವರೆ, ಇಂತಹ ಭೀಕರ ಬರಗಾಲ ಯಾವ ಕಾಲದಲ್ಲೂ ಇರಲಿಲ್ಲ. ಪಾಪ! ಅವರಿಗೆ ಇದರ ಬಗ್ಗೆ ಗೊತ್ತಿಲ್ಲ. ನಿಮಗೆ ಬರಗಾಲದ ಬಗ್ಗೆ ಗೊತ್ತಾಗುವುದಿಲ್ಲ ಬಿಡಿ. ಬರಗಾಲದ ಬಗ್ಗೆ ನಿಮಗೆಲ್ಲಾ ಅರ್ಥವಾಗುವುದಿಲ್ಲ. ಬಿಜೆಪಿ ಶಾಸಕರಿಗೆ ಬರಗಾಲ ಅರ್ಥವಾಗುವುದಿಲ್ಲ. ಪಾಪ! ರೈತರಿಗೇ ಆ ಕಷ್ಟ ಗೊತ್ತಾಗುತ್ತದೆ. ಯಾರು ಅನುಭವಿಸುತ್ತಾರೋ, ಅವರಿಗೇ ಆ ಕಷ್ಟ ಗೊತ್ತಾಗುತ್ತದೆ. ಇದೆಲ್ಲಾ ಇವರಿಗೆ ಹೇಗೆ ಗೊತ್ತಾಗುತ್ತದೆ? ಪಾಪ ಯಾರು ರೈತರು ಕಷ್ಟ ಅನುಭವಿಸುತ್ತಿದ್ದಾರೆ ಅವರಿಗೆ ಗೊತ್ತಾಗುತ್ತದೆ. ಇವರಿಗೆ ಎಲ್ಲಿ ಗೊತ್ತಾಗುತ್ತದೆ? ಇವರು ನೆನ್ನೆ ಹೇಳಿದರು ಏನೇ ತೊಂದರೆಯಾಗಲಿ, ಸರ್ಕಾರ ಹೋಗಲಿ ರೈತರ ಹಿತ ಕಾಪಾಡುತ್ತೇವೆಂದು ವೀರಾವೇಶದ ಮಾತುಗಳನ್ನು ಅನೇಕ ಸಾರಿ ಹೇಳಿದರು. ರೈತರಿಗೆ ಅನ್ಯಾಯವಾದರೆ ಒಂದು ನಿಮಿಷ ಕುರ್ಚಿಯಲ್ಲಿರುವುದಿಲ್ಲವೆಂದು ಹೇಳಿದವರು ಇವರು. ಇವತ್ತು ಇಷ್ಟೊಂದು ದೊಡ್ಡ ಅನ್ಯಾಯವಾಗಿದೆ, ಇವರು ಹೇಗೆ ಕುರ್ಚಿಯಲ್ಲಿ ಇರುತ್ತಾರೆ? ಅಧಿಕಾರದಲ್ಲಿ ಹೇಗೆ ಮುಂದುವರೆಯುತ್ತಾರೆ?

ಶ್ರೀ ಗೋಪಾಲಕೃಷ್ಣ ಬೇಳೂರು : ನಾವು ಹೇಳಲಿಲ್ಲ ಮಾನ್ಯ ಯಡಿಯೂರಪ್ಪನವರು ಹೇಳಿದ್ದು.

ಶ್ರೀ ಸಿದ್ದರಾಮಯ್ಯ : ನೀವು ಅವರ ಜೊತೆಯಲ್ಲಿಯೇ ಇದ್ದಿರಲ್ಲ. ಗೋಪಾಲಕೃಷ್ಣರವರೇ ಅವರ ಜೊತೆಯಲ್ಲಿಯೇ ಇದ್ದು ಮಾತನಾಡಿರುವ ಪತ್ರಿಕಾ statement ಗಳನ್ನು ತೆಗೆಸಲಾ? ಅಧ್ಯಕ್ಷರೆ ಅವರ ಸ್ಟೇಟ್‌ಮೆಂಟ್‌ಗಳು ನಿಮಗೂ ಗೊತ್ತಿದೆ ಅವರಿಗೆ ಹೇಳಿ ಬಿಡಿ. ಏನು ಮಾನ್ಯ ಯಡಿಯೂರಪ್ಪನವರು ನಿಂತರೂ ಮೇಜು ಕುಟ್ಟುವರು ಕುಳಿತರೂ ಮೇಜು ಕುಟ್ಟುವರು. ಇಂತಹ ಮೇಜುಗಾಳಾಗಿದ್ದರೆ ಹೊಡೆದು ಹೋಗುವುವು. ಅವು strong

ಆಗಿರುವ ಮೇಜುಗಳಾಗಿರುವುದರಿಂದ ಉಳಿದುಕೊಂಡಿವೆ, ಅವು ಮಾನ್ಯ ಕೆಂಗಲ್ ಹನುಮಂತಯ್ಯನವರು ಮಾಡಿಸಿರುವ ಮೇಜುಗಳಾಗಿರುವುದರಿಂದ ಉಳಿದುಕೊಂಡಿವೆ. ಇವು ಮಾನ್ಯ ಯಡಿಯೂರಪ್ಪನವರು ಮಾಡಿಸಿರುವ ಮೇಜುಗಳು. ಕುಟ್ಟಿದರೆ ಹೋಗಿಬಿಡುತ್ತವೆ.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಏನೇ ಸರ್ಕಸ್ ಮಾಡಿದರೂ ಕೂಡ ....

ಶ್ರೀ ಸಿದ್ದರಾಮಯ್ಯ : ನಾವು ಏನೇ ಸರ್ಕಸ್ ಮಾಡಿದರೂ ಕೂಡ ನೀರಂತೂ ಬಿಟ್ಟೇ ಬಿಡುತ್ತೀರಾ? ನೀವು ಏನೇ ಸರ್ಕಸ್ ಮಾಡಿದರೂ ನಾವು ನೀರು ಬಿಡುತ್ತೇವೆ, ಈ ರಾಜ್ಯದ ಜನತೆಗೆ ಅನ್ಯಾಯ ಮಾಡುತ್ತೇವೆಂದು ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ತಲೆ ಕೆಳಗೆ ಮಾಡಿ ಕಾಲು ಮೇಲೆ ಮಾಡಿದರೂ ಕಾಂಗ್ರೆಸ್‌ನವರು ನಿಮಗೆ ಮುಖ್ಯ ಮಂತ್ರಿ ಮಾಡುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನು ಮುಖ್ಯ ಮಂತ್ರಿ ಆಗುವುದಿಲ್ಲ, ನೀವಾದರೂ ಮುಖ್ಯ ಮಂತ್ರಿ ಆಗುತ್ತೀರಾ?

ಶ್ರೀ ಕೆ.ಎಸ್. ಈಶ್ವರಪ್ಪ : ನಿಮಗೆ ಬಹುಮತವೂ ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ : ನೀವು ಭ್ರಮಾ ಲೋಕದಲ್ಲಿದ್ದೀರಿ. ಇವತ್ತು ನಿಮಗೆ ಬರೆದು ಕೊಡುತ್ತೇನೆ, ಕಾಂಗ್ರೆಸ್ ಪಕ್ಷ 120 ಸ್ಥಾನಗಳಲ್ಲಿ ಗೆಲ್ಲದೆ ಹೋದರೆ, 120 ಸ್ಥಾನಗಳಿಗಿಂತ ಕಡಿಮೆ ಬಂದರೆ .....

ಶ್ರೀ ಕೆ.ಎಸ್. ಈಶ್ವರಪ್ಪ : ನೆನ್ನೆ ರಾತ್ರಿ ನಿಮಗೆ ಕೆಟ್ಟ ಕನಸು ಬಿದ್ದಿರಬೇಕು.

ಶ್ರೀ ಸಿದ್ದರಾಮಯ್ಯ : ನಮಗೆ ಎಲ್ಲಾ ಒಳ್ಳೆಯ ಕನಸುಗಳೇ ಬೀಳುವುದು. ನಿಮಗೆ ಈಗ ಕೆಟ್ಟ ಕನಸು ಬೀಳುವುದಕ್ಕೆ ಪ್ರಾರಂಭವಾಗಿರುವುದು. ಯಡಿಯೂರಪ್ಪ... ಯಡಿಯೂರಪ್ಪ... ಯಡಿಯೂರಪ್ಪ .... ಪಾಪ, ಯಡಿಯೂರಪ್ಪನವರು ಇಲ್ಲಿಗೇ ಬಂದು ಬಿಟ್ಟಿದ್ದಾರೆ.

(ಗೊಂದಲ)

ಶ್ರೀ ಬಂಡೆಪ್ಪ ಕಾಶಂಪೂರ್ : ಕಾವೇರಿ ಬಗ್ಗೆ ಮಾತನಾಡಿ. ಮುಖ್ಯ ಮಂತ್ರಿ ಯಾರಾಗುತ್ತಾರೆಂದು ಜನ ತೀರ್ಮಾನ ಮಾಡುತ್ತಾರೆ. ನೀವು ಕಾವೇರಿ ಬಗ್ಗೆ ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರಿಗೆ ಕಾವೇರಿ ಬಗ್ಗೆ ಆಸಕ್ತಿ ಇಲ್ಲ. ರಾಜಕಾರಣದ ಬಗ್ಗೆ ಆಸಕ್ತಿ ಇದೆ.

ಶ್ರೀ ಸಿದ್ದರಾಮಯ್ಯ : ಈಗ ನೀವೇನು ಮಾಡುತ್ತಿದ್ದೀರಿ? What is that you are doing? What is that he is doing? ನಾನು ನಿಮಗೆ ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಒತ್ತಾಯ ಮಾಡುತ್ತಿದ್ದೇನೆ. ತಾವು ಇವರಿಗೆ ಮಧ್ಯಸ್ಥಿಕೆ ವಹಿಸಬೇಕು. ಕೂಡಲೇ ನೀರು ಬಿಡುವುದನ್ನು ನಿಲ್ಲಿಸಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಬೇರೆ ಪಕ್ಷ ಮಾಡುವುದರಿಂದ ನಮಗೇನೂ ತೊಂದರೆ ಇಲ್ಲ. ಮಾನ್ಯ ಯಡಿಯೂರಪ್ಪನವರು ಮಾನ್ಯ ಈಶ್ವರಪ್ಪನವರಿಗೆ ಏನು ಹೇಳಿದ್ದಾರೆಂದರೆ, ಮಾನ್ಯ ಈಶ್ವರಪ್ಪನವರು ವಿಧಾನಸಭೆಗೆ ಬಾರದ ಹಾಗೆ ನೋಡಿಕೊಳ್ಳುತ್ತೇನೆಂದು ಹೇಳಿದ್ದಾರೆ. ಅದು ನಮಗೆ ಬೇಸರವಾಗುತ್ತಿರುವುದು.

ಅಧ್ಯಕ್ಷರು : ಸುಮ್ಮನೆ ಇಲ್ಲದವರ ಬಗ್ಗೆ ಮಾತನಾಡಬೇಡಿ.

ಶ್ರೀ ಸಿದ್ದರಾಮಯ್ಯ : ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರದೂ ಇದೇ ಕಥೆ. ಅವರೂ ಕೂಡ ಈಶ್ವರಪ್ಪ ಹಾಗೂ ಬಿಜೆಪಿ ಗೆಲ್ಲಬಾರದು ಎಂದು. ಜನತಾದಳದವರೂ ಅದೇ. ಒಂದು ಮಾತು ತುಂಬ ಸ್ಪಷ್ಟವಾಗಿ ಹೇಳುತ್ತೇನೆ, ಶಿವಮೊಗ್ಗ ನಗರದಲ್ಲಿ ನಾನಲ್ಲ ಒಬ್ಬ ಸಾಮಾನ್ಯ ಕಾರ್ಯಕರ್ತನಿದ್ದರೂ ಕೂಡ ಸಂಘಟನೆ ಶಕ್ತಿಶಾಲಿಯಾಗಿದೆ, ನೂರಕ್ಕೆ ನೂರು ಗೆಲ್ಲುತ್ತಾರೆ. ಅನುಮಾನ ಬೇಡ.

ಶ್ರೀ ಸಿದ್ದರಾಮಯ್ಯ : ಬಹಳ ಸಂತೋಷ.

ಅಧ್ಯಕ್ಷರು : ರಾಜಕೀಯ ಬೇಡ, ಕಾವೇರಿ ಬಗ್ಗೆ ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಈಗ ರಾಜಕಾರಣ ಬೇಡ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಚರಂತಿಮಠರವರೇ ನಿಮ್ಮ ಮೇಲೆಯೂ ಕಣ್ಣು ಇಟ್ಟುಕೊಂಡಿದ್ದಾರೆ, ಹುಷಾರ್.

ಶ್ರೀ ವೀರಣ್ಣ ಚರಂತಿಮಠ : ನಮಗೆ ಕಾವೇರಿ ಬಗ್ಗೆ ವಿರೋಧ ಇಲ್ಲ.

ಶ್ರೀ ಸಿದ್ದು ಸವದಿ : ಕೃಷ್ಣ ನದಿಯಲ್ಲಿ ನಾಲ್ಕು ತಿಂಗಳು ನೀರು ಇರುವುದಿಲ್ಲ. ಮಹಾರಾಷ್ಟ್ರದಿಂದ ಬಿಡಿಸುತ್ತಾರಾ ಕೇಳಿ.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಅವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ.

ಅಧ್ಯಕ್ಷರು : ಸವದಿಯವರೇ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಅವರು ಏನು ಹೇಳುತ್ತಿದ್ದಾರೆ? ಅವರು ವಿಪ್ ಬೇರೆ, ಅವರಿಗೆ ಕುಳಿತುಕೊಳ್ಳಲಿಕ್ಕೆ ಹೇಳಿ. Let him function like whip.

ಶ್ರೀ ಶ್ರೀಕಾಂತ್ ಕುಲಕರ್ಣಿ : ಮಾನ್ಯ ಅಧ್ಯಕ್ಷರೆ, ನಮ್ಮ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಈ ರೀತಿ ದೊಂಬರಾಟ ಮಾಡಿಕೊಂಡು ಕುಳಿತರೆ ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ adjournment motion ಕೊಟ್ಟಿದ್ದೇನೆ. ನೆನ್ನೆ adjournment motion ಕೊಟ್ಟಿದ್ದೇನೆ. ಇವತ್ತೂ adjournment motion ಕೊಟ್ಟಿದ್ದೇನೆ. ನಂಜುಂಡಪ್ಪ ವರದಿ ಬಗ್ಗೆ ಮಾತನಾಡುವುದಕ್ಕೆ adjournment motion ಕೊಟ್ಟಿದ್ದೇನೆ. ಬರಗಾಲದ ಬಗ್ಗೆ ಮಾತನಾಡುವುದಕ್ಕೆ adjournment motion ಕೊಟ್ಟಿದ್ದೇನೆ. ನಿಮಗೆ ಇವೆಲ್ಲಾ ಅರ್ಥವಾಗುತ್ತದೆಯೋ ಇಲ್ಲವೋ ಮಾನ್ಯ ಅಧ್ಯಕ್ಷರೆ, ಇವರು ನಿಮ್ಮ ಅನುಮತಿ ತೆಗೆದುಕೊಂಡು ಮಾತನಾಡುತ್ತಿದ್ದಾರೆ?

ಅಧ್ಯಕ್ಷರು : ಒಂದು ನಿಮಿಷ ಕುಳಿತುಕೊಳ್ಳಿ. ಸಿದ್ದುಸವದಿಯವರೇ, ಶ್ರೀಕಾಂತ್ ಕುಲಕರ್ಣಿಯವರೇ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಿಮ್ಮ ಅಭಿಪಾಯ well taken. We have done well. ಈ ಸರ್ಕಾರ ರಾತ್ರೋ ರಾತ್ರಿ ನೀರು ಬಿಡುವುದರ ಮೂಲಕ ಕಾವೇರಿ ಜಲಾನಯನ ಪ್ರದೇಶದ ಜನರಿಗೆ ದೊಡ್ಡ ಅನ್ಯಾಯ ಮಾಡಿದೆ....

(ಗೊಂದಲ)

ಅಧ್ಯಕ್ಷರು : ಇಲ್ಲದವರ ಹೆಸರುಗಳನ್ನು ಏಕೆ ತೆಗೆದುಕೊಳ್ಳುತ್ತೀರಿ? ಯಾವುದೊ ದಾಖಲೆಗೆ ಹೋಗುವುದಿಲ್ಲ. ನೀವೇನು ಮಾತನಾಡಿದರೂ ದಾಖಲೆಗೆ ಹೋಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಕೆರೆಗಳೆಲ್ಲಾ ಒಣಗಿ ಹೋಗಿವೆ, ಕುಡಿಯುವುದಕ್ಕೆ ನೀರಿಲ್ಲ. ದನಕರುಗಳಿಗೆ ಮೇವಿಲ್ಲ ಇಂತಹ ಸಮಯದಲ್ಲಿ ಅವರು ಸರ್ಕಾರ ಹೋಗುತ್ತದೆ ಎಂದು ಕುರ್ಚಿಗೋಸ್ಕರ ಹೆದರಿಕೊಂಡು ನೀರು ಬಿಟ್ಟಿದ್ದಾರೆ. ಅವತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದ ಮಾತುಗಳು, ಸರ್ಕಾರ ಹೋದರೂ ಪರವಾಗಿಲ್ಲ ನಾವು ನೀರು ಬಿಡುವುದಿಲ್ಲವೆಂದು ಹೇಳಿದವರು ನೀರು ಬಿಟ್ಟು ಆ ಭಾಗದ ಜನರಿಗೆ ದ್ರೋಹ ಮಾಡಿದ್ದಾರೆ. ಅನ್ಯಾಯ ಮಾಡಿದ್ದಾರೆ. ಅದಕ್ಕೋಸ್ಕರ ನಾವು ಧರಣಿ ಮಾಡುತ್ತಿದ್ದೇವೆ. ದಯಮಾಡಿ ತಾವು ಈ ಬಿಕ್ಕಟ್ಟನ್ನು ಬಗೆಹರಿಸಬೇಕೆಂದು ನಿಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇವೆ. 10,000 ಕ್ಯೂಸೆಕ್ಸ್ ನೀರು ಕೊಡುತ್ತೇವೆಂದು ಸುಪ್ರೀಂ ಕೋರ್ಟ್‌ಗೆ ಬರೆದು ಕೊಟ್ಟವರು ಯಾರು? ಅಫಿಡವಿಟ್ ಹಾಕಿದವರು ಯಾರು? ನೀವಲ್ಲವೇ? ಕರ್ನಾಟಕದ ನೀರನ್ನು ಹಾಳು ಮಾಡಿದವರು ಇವರು.

ಶ್ರೀ ಬಂಡೆಪ್ಪ ಕಾಶಂಪೂರ್ : ನಾವು ನಮ್ಮ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡಲಾಗಿದೆ.

(ಸದನವು 10 ಗಂಟೆ 49 ನಿಮಿಷಕ್ಕೆ ಮುಕ್ತಾಯವಾಗಿ ಅರ್ಧ ಗಂಟೆ ನಂತರ ಪುನಃ ಸೇರುವಂತೆ ಮುಂದೂಡಲಾಯಿತು)

ಸದನವು ಮಧ್ಯಾಹ್ನ 12 ಗಂಟೆ 26 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಪಕ್ಷದ ಸದಸ್ಯರು ಧರಣಿಯಲ್ಲಿ ನಿರತರಾಗಿದ್ದರು)

ಅಧ್ಯಕ್ಷರು : ಎಲ್ಲ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವುಗಳು ಧರಣಿಯನ್ನು ವಾಪಸ್ಸು ತೆಗೆದುಕೊಂಡು ತಮ್ಮ ಸ್ಥಾನಕ್ಕೆ ಹೋಗಿ, ಕಲಾಪವನ್ನು ಸುಗಮವಾಗಿ ನಡೆಸೋಣ.

ಶ್ರೀ ಬಂಡೆಪ್ಪ ಕಾಂಶಪೂರ್ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಬೇಕಾದರೆ, ಆದ್ದರಿಂದ, ನನಗೆ 5 ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಮಾತನಾಡಿ.

ಶ್ರೀ ಬಂಡೆಪ್ಪ ಕಾಂಶಪೂರ್ (ಬೀದರ್) : ಮಾನ್ಯ ಅಧ್ಯಕ್ಷರೆ, ನೆನ್ನೆದಿವಸ ಸಾಯಂಕಾಲ ನಮ್ಮ ಪಕ್ಷದ ನಾಯಕರಾದ ಶ್ರೀ ರೇವಣ್ಣನವರು ಮತ್ತು ಇತರರು ಹಾಗೂ ಆ ಭಾಗದ ಶಾಸಕರು ಸೇರಿ ಯಾವುದೇ ಕಾರಣಕ್ಕೂ ಒಂದು ಹನಿ ನೀರು ಬಿಡಬಾರದೆಂದು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದೆವು. ಆದರೆ, ನೆನ್ನೆದಿವಸ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಸಮಗ್ರವಾಗಿ ಉತ್ತರ ಕೊಟ್ಟು ಯಾವರೀತಿಯಾಗಿ confidence build up ಮಾಡಿದರೆಂದರೆ, ರೈತರ ಹಿತದೃಷ್ಟಿಯನ್ನು ನಾವು ಕಾಪಾಡುತ್ತೇವೆ, ಹಾಗೆಯೇ ರೈತರಿಗೆ ಯಾವುದೇ ರೀತಿಯ ತೊಂದರೆ ಆಗುವುದಕ್ಕೆ ಬಿಡುವುದಿಲ್ಲವೆಂದು ಹೇಳಿ ರಾತ್ರೋರಾತ್ರಿ ನೀರು ಬಿಟ್ಟಿದ್ದಾರೆ. ನಾವು ಜೈಲಿಗೆ ಹೋದರು ಪರವಾಗಿಲ್ಲವೆಂದು ಮುಖ್ಯ ಮಂತ್ರಿಯಾಗಿರುವ ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದ್ದರು. ಇವತ್ತು ಅವರು ಇನ್ನೂ ಜೈಲಿಗೆ ಹೋಗಿಲ್ಲ. ಆದ್ದರಿಂದ ಅವರು ನೀರನ್ನು ಏತಕ್ಕೆ ಬಿಟ್ಟರು? ಆ ಭಾಗದ ಜನ ಬೆಳಿಗ್ಗೆ 6 ಗಂಟೆಯಿಂದ ಅಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ. ಅಲ್ಲಿನ ಮುಖಂಡರು ಡಿ.ಸಿ. ಮತ್ತು ತಹಸೀಲ್ದಾರ್‌ವರ ಜೊತೆ ಮಾತನಾಡಿದಾಗ ಯಾವುದೇ ಕಾರಣಕ್ಕೂ ನೀರು ಬಿಡುವುದಿಲ್ಲವೆಂದು ಆ ಸಂದರ್ಭದಲ್ಲಿ ಅವರು ಹೇಳಿದ್ದಾರೆ. ಹಾಗಾಗಿ ಈ ಸರ್ಕಾರ ಸುಳ್ಳು ಹೇಳುತ್ತಿದೆ. ಈ ಸರ್ಕಾರ ನಾಲ್ಕುವರೆ ವರ್ಷದಿಂದ ಸುಳ್ಳು ಹೇಳ ತಕ್ಕಂಥದ್ದೆ ಹಾಗಿದೆ, ಆದರೆ ಇವತ್ತು ರೈತರ ಹೆಸರಿನಲ್ಲಿ ಸುಳ್ಳು ಹೇಳಿ ರಾತ್ರೋರಾತ್ರಿಯಿಂದ ನೀರು ಬಿಡುವಂತ ಕೆಲಸವನ್ನು ಇವರು ಮಾಡಿದ್ದಾರೆ. ನೆನ್ನೆದಿವಸ ಮಾನ್ಯ ಮುಖ್ಯ ಮಂತ್ರಿಗಳು ದೊಡ್ಡ ರೀತಿಯಲ್ಲಿ ಈ ಬಗ್ಗೆ ಉತ್ತರ ಕೊಡುತ್ತಾ ನಾವು ರೈತರ ಹಿತ ಕಾಪಾಡುತ್ತೇವೆಂದು ಮತ್ತು ನಾವು ಯಾವುದೇ ಕಾರಣಕ್ಕೂ ಅವರಿಗೆ ತೊಂದರೆ ಕೊಡುವುದಿಲ್ಲವೆಂಬ ನಿಟ್ಟಿನಲ್ಲಿ ನಿನ್ನೆದಿವಸ ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ಇವತ್ತಿನದಿವಸ ಅಲ್ಲಿನ ರೈತರ ನಿಜಕ್ಕೂ ಸಹ ಬಹಳ ಸಂಕಷ್ಟದಲ್ಲಿದ್ದಾರೆ. ಇವತ್ತಿನದಿವಸ ಎಲ್ಲದಕ್ಕಿಂಥ ಮುಖ್ಯವಾಗಿ ಕುಡಿಯುವುದಕ್ಕೆ ನೀರು ಬೇಕಾಗಿದೆ. ಇವತ್ತಿನದಿವಸ ದುಡ್ಡು ಕೊಡುತ್ತೇವೆಂದರೂ ಸಹ ಕುಡಿಯುವ ನೀರು ಸಿಗುವುದಿಲ್ಲ. ಒಂದೊಂದು ಮಿನರಲ್ ವಾಟರ್ ಬಾಟಲ್‌ಗೆ 15 ರೂಪಾಯಿ ಆಗಿದೆ. ನಾಳೆದಿವಸ ಕುಡಿಯುವ ನೀರು ಸಿಗುವುದಿಲ್ಲವೆಂದರೆ ದುಡ್ಡು ಎಲ್ಲಿಂದ ತರಬೇಕು? ಬೆಳೆ

ಹೋದರೆ ಏನಾದರು ಪರಿಹಾರವಾದರು ಕೊಡಬಹುದು. ಆದ್ದರಿಂದ, ವಿಶೇಷವಾಗಿ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ನೀರಾವರಿ ಸಚಿವರು ರೈತರ ಹಿತದೃಷ್ಟಿ ಕಾಪಾಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಆದ್ದರಿಂದ, ಈ ಸರ್ಕಾರ ಮುಂದುವರಿಯುವುದಕ್ಕೆ ಯಾವುದೇ ರೀತಿಯ ನೈತಿಕತೆ ಇಲ್ಲವೆಂದು ಹೇಳುತ್ತೇನೆ. ನೆನ್ನೆದಿವಸ ಮಾನ್ಯ ಮುಖ್ಯ ಮಂತ್ರಿಯವರು ಇಲ್ಲಿ ಉತ್ತರ ಕೊಟ್ಟಿದ್ದಾರೆ. ಆದರೆ, ಇಲ್ಲಿ ಅದ್ಯಾವುದಕ್ಕೂ ಸಹ ಬೆಲೆ ಇಲ್ಲ. ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ಈ ತಕ್ಷಣ ನೀರನ್ನು ನಿಲ್ಲಿಸಿ ಅಲ್ಲಿನ ರೈತರ ಹಿತದೃಷ್ಟಿಯನ್ನು ಕಾಪಾಡಬೇಕೆಂದು ತಮ್ಮ ಮುಖಾಂತರ ಸರ್ಕಾರದವರಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಸಚಿವರು) : ಮಾನ್ಯ ಅಧ್ಯಕ್ಷರೆ, ನೆನ್ನೆದಿವಸ ಮಾನ್ಯ ಮುಖ್ಯ ಮಂತ್ರಿಗಳು ಬಹಳ ದೀರ್ಘವಾಗಿ ಉತ್ತರ ಕೊಟ್ಟು, ಇವತ್ತು ಕೇಂದ್ರದಲ್ಲಿ ಕೂಡ ಇದರ ಬಗ್ಗೆ ಇನ್ನಷ್ಟು ಒತ್ತಾಯ ತರುವುದಕ್ಕೆ ಮತ್ತು ಕೇಂದ್ರ ಸರ್ಕಾರದ ಪ್ರಮುಖರ ಜೊತೆ ಮಾತನಾಡುವುದಕ್ಕೆ ಹೋಗಿದ್ದಾರೆ. ನಮ್ಮ ವಕೀಲರ ತಂಡದಿಂದ ನಮಗೆ ನೆನ್ನೆ ಸಂಜೆ ಒಂದು ಸಂದೇಶ ಬಂತು, ಅದೇನೆಂದರೆ, ತಮಿಳುನಾಡು ರಾಜ್ಯದ ವಕೀಲರು ನಮ್ಮ ವಕೀಲರಿಗೆ ಒಂದು ಪತ್ರ ಬರೆದಿದ್ದು, ಅದರಲ್ಲಿ ಏನು ಹೇಳಿದ್ದಾರೆಂದರೆ, ಇವತ್ತು ಬೆಳಿಗ್ಗೆ ಅಂದರೆ ಶುಕ್ರವಾರ ಬೆಳಿಗ್ಗೆ 10.30 ಗಂಟೆಗೆ ನಮ್ಮ ಮೇಲೆ ಒಂದು contempt petition ಅನ್ನು move ಮಾಡುತ್ತಾರೆಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಮತ್ತೆ ಅವರು ಕೋರ್ಟಿಗೆ ಹೋಗುವ ಒಂದು ಸಂದರ್ಭದಲ್ಲಿ ಹಾಗೂ ಮತ್ತೆ ಸೋಮವಾರ ಈ ಒಂದು ವಿಚಾರಣೆ ಸುಪ್ರೀಂಕೋರ್ಟಿನ ಮುಂದೆ ಬರುವ ವಿಚಾರದಲ್ಲಿ ಕಾನೂನು ಮತ್ತು ನಮ್ಮ ಸಲಹೆ ಮತ್ತು ಹಿರಿಯ ತಂಡ ಏನಿದೆ ಅಲ್ಲಿನ ಕಾನೂನು ಸಲಹೆಗಾರರು ಕೊಟ್ಟ ಒಂದು ಸೂಚನೆಯ ಮೇರೆಗೆ ನಮಗೆ ಕೊಟ್ಟಿರುವ ಒಂದು ನಿರ್ದೇಶನದ ಮೇರೆಗೆ ನಮಗೆ ತಿಳಿದಿರುವ ವಿಚಾರದ ಮೇರೆಗೆ ನಿನ್ನೆ ರಾತ್ರಿ ನೀರು ಬಿಡುವ ಒಂದು ಪ್ರಸಂಗ ಒದಗಿ ಬಂದಿದೆ. ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಒಂದು ಮಾತು ಹೇಳುತ್ತಿದ್ದಾರೆ. ನಾವು ಉತ್ತರ ಕರ್ನಾಟಕದ ಬಗ್ಗೆ ಮಾತನಾಡಬೇಕು. ಆದರೆ ಅನಿವಾರ್ಯವಾಗಿ ಈ ರೀತಿಯ ಒಂದು ಧರಣಿ ಕೂಡುವ ಪ್ರಸಂಗ ಬಂದಿದೆ ಎಂದು ಹಾಗೂ ಅದೇ ರೀತಿಯಿಂದ ರಾಜ್ಯದ ದೀರ್ಘಕಾಲಿನ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ನಮಗೆ ಕಾನೂನು ಸಲಹೆ ಏನು ಕೊಟ್ಟಿದ್ದಾರೆ ಅದರ ಹಿನ್ನೆಲೆಯಲ್ಲಿ ಮತ್ತೆ ಸುಪ್ರೀಂಕೋರ್ಟಿಗೆ

ಹೋಗಬೇಕಾದ ಒಂದು ಸನ್ನಿವೇಶದಲ್ಲಿ ನೀರು ಬಿಡುವ ಈ ಒಂದು ಪ್ರಸಂಗ ಒದಗಿ ಬಂದಿದೆ. ಅದಕೋಸ್ಕರ ರಾಜ್ಯದ ಹಿತದೃಷ್ಟಿಯಿಂದ ನೀರು ಬಿಡುವ ಒಂದು ಪ್ರಸಂಗ ಒದಗಿ ಬಂದಿದೆ ಎಂದು ಈ ಸದನದ ಗಮನಕ್ಕೆ ನಾನು ತರುವುದಕ್ಕೆ ಇಷ್ಟಪಡುತ್ತೇನೆ. ಅದನ್ನು ತಾವೆಲ್ಲರೂ ಕೂಡ ಅರ್ಥಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

(ಸದನದ ಬಾವಿಯಲ್ಲಿ ಕಾಂಗ್ರೆಸ್, ಜೆಡಿಎಸ್ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಅಧ್ಯಕ್ಷರು : ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುವುದು ಹಾಗೂ ಘೋಷಣೆ ಕೂಗುವುದು ಯಾವುದು ದಾಖಲೆಗೆ ಹೋಗುವುದಿಲ್ಲ.

(ಸದನದ ಬಾವಿಯಲ್ಲಿ ಕಾಂಗ್ರೆಸ್, ಜೆಡಿ(ಎಸ್) ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಅಧ್ಯಕ್ಷರು : ಸದನದ ಬಾವಿಯಲ್ಲಿರುವಂತಹ ಎಲ್ಲಾ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ಕೇಳಿಕೊಳ್ಳುತ್ತೇನೆ. ಸದನವನ್ನು ನಡೆಸಿ ಒಳ್ಳೆಯ ಸಂದೇಶವನ್ನು ಕೊಡೋಣ.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 12 ಗಂಟೆ 35 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ
ದಿನಾಂಕ : 10–12–2012ರ ಸೋಮವಾರ ಬೆಳಿಗ್ಗೆ 11.00 ಗಂಟೆಗೆ
ಸಮಾವೇಶಗೊಳ್ಳಲು ನಿಶ್ಚಯಿಸಿತು)